<u>ಕರ್ನಾಟಕ ವಿಧಾನ ಪರಿಷತ್ತು</u>

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಕೆ. ಎ. ತಿಪ್ಪೇಸ್ವಾಮಿ, ಶ್ರೀ ಟಿ. ಎ. ಶರವಣ, ಡಾ: ಸೂರಜ್ ರೇವಣ್ಣ ಹಾಗೂ ಶ್ರೀ ಸಿ. ಎನ್. ಮಂಜೇಗೌಡ ರವರು ನಿಯಮ 72 ರಡಿ "ಮಹಿಳೆಯರು ಹೆಚ್ಚಿರುವ ಇಲಾಖೆಗಳಲ್ಲಿ ಶಿಶುಪಾಲನೆ ಪಡೆಯುತ್ತಿರುವ ಮಹಿಳೆಯರಿಂದ ಸರ್ಕಾರಿ ಕೆಲಸ ಕಾರ್ಯಗಳಲ್ಲಿ ವಿಳಂಬವಾಗುತ್ತಿರುವುದರಿಂದ ಶಿಶುಪಾಲನಾ ರಜೆಯಲ್ಲಿನ ಲೋಪಗಳನ್ನು ಸರಿಪಡಿಸುವ ಕುರಿತು" ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ:

<u>ಗಮನ ಸೆಳೆಯುವ ಸೂಚನೆ:</u>

ಸರ್ಕಾರಿ ಮಹಿಳಾ ನೌಕರರಿಗೆ 180 ದಿನ (6 ತಿಂಗಳು) ಶಿಶುಪಾಲನಾ ರಜೆಯನ್ನು ದಿನಾಂಕ 21-06-2021 ರಂದು ಜಾರಿಗೊಳಿಸಿರುವುದು ಸ್ವಾಗತಾರ್ಹ ವಿಚಾರವಾದರೂ, ಶಿಶುಪಾಲನಾ ರಜೆಯಲ್ಲಿರುವ ಲೋಪದೋಷಗಳನ್ನು ಸರಿಪಡಿಸಬೇಕಾಗಿರುತ್ತದೆ. ಶಿಶುಪಾಲನಾ ರಜೆಯನ್ನು ಮಕ್ಕಳಿಗೆ 18 ವರ್ಷ ತಲುಪುವವರೆಗಿನ ಯಾವುದೇ ಸಂದರ್ಭದಲ್ಲಿ ಕನಿಷ್ಠ 15 ದಿನಗಳಿಂದ ಗರಿಷ್ಠ 180 ದಿನಗಳ ರಜೆ ಪಡೆಯಬಹುದಾಗಿದೆ. ಇಂತಹ ಸಂದರ್ಭದಲ್ಲಿ ಒಂದು ವರ್ಷ ವಯೋಮಿತಿಯ ಮಗುವನ್ನು ಹೊಂದಿರುವ ಸರ್ಕಾರಿ ಮಹಿಳೆಯರು ಆ ಮಗು 18 ವರ್ಷ ತಲುಪುವವರೆಗೆ ಅಂದರೆ 17 ವರ್ಷಗಳ ದೀರ್ಘ ಅವಧಿಯಲ್ಲಿ 180 ದಿನಗಳ ಶಿಶುಪಾಲನಾ ರಜೆ ಪಡೆಯಬಹುದಾಗಿರುತ್ತದೆ. 15, 16 ಅಥವಾ 17 ವರ್ಷದ ಮಗುವನ್ನು ಹೊಂದಿರುವ ಸರ್ಕಾರಿ ಮಹಿಳೆಯರು ಆ ಮಗು 18 ವರ್ಷ ತಲುಪುವವರೆಗೆ ಅಂದರೆ ಕೇವಲ 2-3 ವರ್ಷಗಳ ಅತ್ಯಲ್ಪ ಅವಧಿಯಲ್ಲಿ 180 ದಿನಗಳ ಶಿಶುಪಾಲನಾ ರಜೆ ಪಡೆಯಬಹುದಾಗಿರುತ್ತದೆ. ಈ ತಾರತಮ್ಯವನ್ನು ಹೋಗಲಾಡಿಸಲು ಮಕ್ಕಳ ವಯಸ್ಸಿನ ಆಧಾರದಲ್ಲಿ ಸ್ಲಾಬ್ ನಿಗಧಿಪಡಿಸಿ ರಜೆ ಮಂಜೂರು ಮಾಡುವುದು ಮತ್ತು ಶಿಶುಪಾಲನೆಯನ್ನು ಕೇವಲ ಮಹಿಳೆಯರಿಗೆ ಮಾತ್ರ ಸೀಮಿತಗೊಳಿಸಿ, ಪತ್ನಿ ನಿಧನ ಹೊಂದಿರುವ ಹಾಗೂ ಪುನಃ ವಿವಾಹವಾಗದ ಪುರುಷ ಸರ್ಕಾರಿ ನೌಕರರನ್ನು ಶಿಶುಪಾಲನಾ ರಜೆಗೆ ಪರಿಗಣಿಸುವ ಬಗ್ಗೆ ಹಾಗೂ ಹೆಚ್ಚಿನ ಮಹಿಳೆಯರೇ ಇರುವ ಇಲಾಖೆಗಳಲ್ಲಿ ರಜೆ ಮಂಜೂರು ಮಾಡುವಾಗ ಸರ್ಕಾರಿ ಕೆಲಸ-ಕಾರ್ಯಗಳಲ್ಲಿ ಉಂಟಾಗುವ ವಿಳಂಬತೆ ಮತ್ತು ಶಿಶುಪಾಲನಾ ರಜೆಯಲ್ಲಿರುವ ಇನ್ನಿತರ ಲೋಪಗಳನ್ನು ಸರಿಪಡಿಸುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

<u>ಸರ್ಕಾರದ ಉತ್ತರ:</u>

2021-22 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮೂಲತಃ ಮಹಿಳೆಯರಿಗೆ ವಿಶೇಷ ಅವಕಾಶಗಳನ್ನು ಕಲ್ಪಿಸಲು ಉದ್ದೇಶಿಸಿ ಮಾಡಲಾದ ಘೋಷಣೆಗಳಲ್ಲಿ ರಾಜ್ಯ ಸರ್ಕಾರದ ಮಹಿಳಾ ನೌಕರರ ಕ್ಷೇಮಾಭಿವೃದ್ಧಿಗಾಗಿ ಹಾಗೂ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಉದ್ದೇಶದಿಂದ ಶಿಶುಪಾಲನಾ ರಜೆಯ ಸೌಲಭ್ಯವನ್ನು ಕಲ್ಪಿಸುವ ಘೋಷಣೆಯನ್ನು ಮಾಡಲಾಗಿದ್ದು, ಅದರ ಅನುಸರಣಾ ಕ್ರಮವಾಗಿ ಸರ್ಕಾರಿ ಆದೇಶ ಸಂಖ್ಯೆ ಆಇ 4(ಇ) ಸೇನಿಸೇ 2021, ದಿನಾಂಕ 21/06/2021 ರಲ್ಲಿ ಶಿಶುಪಾಲನಾ ರಜೆ ಮಂಜೂರಾತಿ ಆದೇಶ ಹೊರಡಿಸಲಾಗಿರುತ್ತದೆ. ಶಿಶುಪಾಲನಾ ರಜೆಯನ್ನು ಮಹಿಳಾ ನೌಕರರಿಗೆ ಗರಿಷ್ಠ ಆರು ತಿಂಗಳವರೆಗೆ ಅವರ ಮಕ್ಕಳ ಸಂಖ್ಯೆಯನ್ನು ಪರಿಗಣಿಸದೆ, ಅತ್ಯಂತ ಕಿರಿಯ ಮಗುವು 18 ವರ್ಷ ತಲುಪುವವರೆಗಿನ ಅವಧಿಗೆ ಮಾತ್ರ ಮಂಜೂರು ಮಾಡಬಹುದಾಗಿದ್ದು, ಅವರ ಸೇವಾ ಪುಸ್ತಕದಲ್ಲಿ ನಮೂದಿಸಿರುವ ಮಕ್ಕಳ ವಿವರಗಳ ಆಧಾರದ ಮೇಲೆ 18 ವರ್ಷ ತಲುಪುವವರೆಗಿನ ಯಾವುದೇ ವಯಸ್ಸಿನ ಮಕ್ಕಳ ಆರೋಗ್ಯ ಹಾಗೂ ಪರೀಕ್ಷಾ ಹಿತದೃಷ್ಟಿಯಿಂದ ಅವರ ಅವಶ್ಯಕತೆ ಹಾಗೂ ಅನಿವಾರ್ಯತೆಗೆ ಅನುಗುಣವಾಗಿ ಯಾವುದೇ ತಾರತಮ್ಯವಿಲ್ಲದೆ 18 ವರ್ಷ ತಲುಪುವವರೆಗಿನ ಎಲ್ಲಾ ಮಕ್ಕಳ ಆರೈಕೆಗಾಗಿ ಈ ರಜೆಯ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.



... by D JAGADEESHA, CMO IS(GJ), JOINT SECREATRY, CMO on 23/12/2022 12:33 PM

ಇದರಿಂದ ತಾರತಮ್ಯದ ಪ್ರಶ್ನೆ ಉದ್ಭವಿಸುವುದಿಲ್ಲ. ಹಾಗಾಗಿ, ಮಕ್ಕಳ ವಯಸ್ಸಿನ ಆಧಾರದಲ್ಲಿ ಸ್ಲಾಬ್ ನಿಗದಿಪಡಿಸಿ ರಜೆ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ರಾಜ್ಯ ಸರ್ಕಾರದ ಮಹಿಳಾ ನೌಕರರ ಕ್ಷೇಮಾಭಿವೃದ್ಧಿ ಹಾಗೂ ಕಾರ್ಯಕ್ಷಮತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಹಾಗೂ ಮಕ್ಕಳ ಆರೈಕೆಯಲ್ಲಿ ತಾಯಿಯ ಪಾತ್ರ ಅತ್ಯುನ್ನತವಾಗಿರುವುದರಿಂದ ಮಹಿಳಾ ನೌಕರರಿಗೆ ಚಾಲ್ತಿಯಲ್ಲಿರುವ ಪ್ರಸೂತಿ ರಜೆಯೊಂದಿಗೆ ರಾಜ್ಯ ಶಿಶುಪಾಲನಾ ರಜೆಯನ್ನು ಘೋಷಿಸಿದ್ದು, ಪತ್ನಿಯು ನಿಧನ ಹೊಂದಿರುವ ಪುರುಷ ಸರ್ಕಾರಿ ಅಧಿಕಾರಿ/ನೌಕರರಿಗೆ ಹಾಗೂ ಪುನಃ ವಿವಾಹವಾಗದ ಪುರುಷ ಸರ್ಕಾರಿ ನೌಕರರಿಗೆ ಶಿಶುಪಾಲನಾ ರಜೆ ಅನ್ವಯಿಸುವುದಿಲ್ಲ. ಮೂಲತಃ ಶಿಶುಪಾಲನಾ ರಜೆಯನ್ನು ಮಹಿಳಾ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಮಂಜೂರು ಮಾಡಿರುವುದರಿಂದ ತಾರತಮ್ಯದ ಪ್ರಶ್ನೆ ಉದ್ಭವಿಸುವುದಿಲ್ಲ.

ಮುಂದುವರೆದು, ಮಹಿಳೆಯರೇ ಹೆಚ್ಚಿರುವ ಇಲಾಖೆಗಳಲ್ಲಿ ಏಕಕಾಲದಲ್ಲಿ ಹಲವರಿಗೆ ರಜೆ ಮಂಜೂರು ಮಾಡಬೇಕಾದಂತಹ ಸಂದರ್ಭಗಳಲ್ಲಿ ರಜೆ ಮಂಜೂರು ಮಾಡಲು ಸಕ್ಷಮ ಪ್ರಾಧಿಕಾರವು ಶಿಶುಪಾಲನಾ ರಜೆ ಮಂಜೂರಾತಿ ಕೋರಿ ಬಂದಿರುವ ಅರ್ಜಿಗಳನ್ನು ಆಯಾಯ ಪ್ರಕರಣದ ಅರ್ಹತೆಯ ಆಧಾರದ ಮೇಲೆ ಪರಿಶೀಲಿಸಿ ಆಡಳಿತಾತ್ಮಕ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ರಜೆ ಮಂಜೂರು ಮಾಡಬಹುದಾಗಿದೆ. ಹೀಗಿರುವಾಗ, ಸರ್ಕಾರಿ ಕೆಲಸ-ಕಾರ್ಯಗಳಲ್ಲಿ ವಿಳಂಬ ಉಂಟಾಗುವ ಸಾಧ್ಯತೆಯು ಹೆಚ್ಚಿರುವುದಿಲ್ಲ. ಸದರಿ ಆದೇಶವನ್ನು ಜಾರಿಗೊಳಿಸುವಲ್ಲಿ ತೊಡಕುಗಳು ಉಂಟಾದ ಬಗ್ಗೆ ಸರ್ಕಾರದ ಇಲಾಖೆಯಿಂದ ವರದಿ ಸ್ವೀಕೃತವಾಗಿರುವುದಿಲ್ಲ.

ಮೇಲಿನ ಹಿನ್ನೆಲೆಯಲ್ಲಿ ಶಿಶುಪಾಲನಾ ರಜೆ ಮಂಜೂರಾತಿ ಆದೇಶದಲ್ಲಿ ಲೋಪಗಳು ಯಾವುದು ಇರುವುದಿಲ್ಲವಾದ್ದರಿಂದ ಅದನ್ನು ಸರಿಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಸಂಖ್ಯೆ: ಆಇ 20(ಇ) ಸೇನಿಸೇ 2022



C 138

Generated from eOffice by G JAGADEESHA, CMO-JS(GJ), JOINT SECREATRY, CMO on 22/12/2022 12:33 PM